ಬಸ್ತಿಪೇಟೆ, ಮೂರ್ಕಟ್ಟೆಯ ಗಲ್ಲಿ, ಮೂರೂರು ರಸ್ತೆ, ಹೆರವಟ್ಟೆಗಳೆಲ್ಲ. ಊಹೂಂ... ಶಾಂತವಲ್ಲ, ಸ್ತಬ್ಧವಾಗಿದ್ದವು. ಯಾಕೆಂದರೆ ಅಲ್ಲಿ ಎಂದಿನ ಆಪ್ತತೆಯಾಗಲಿ, ಭರಪೂರ ಸಿಗುವ ಪ್ರೀತಿಯಾಗಲೀ ಇರಲಿಲ್ಲ, ಒಂದು ರೀತಿಯ ಕ್ರೌರ್ಯವೇ ರಾವುಬಡಿಯುತ್ತಿತ್ತು.

ಕುಮಟೆಯ ನಿರ್ಜನ ರಸ್ತೆಯ ಅಕ್ಕ ಪಕ್ಕದ ಮನೆಗಳಲ್ಲಿ, ಸುತ್ತಣ ಊರುಗಳ ಸಂದಿಗೊಂದಿಯಲ್ಲಿ ಬಹುಶಃ ನಾಳೆಗೆ ಬೇಕಾಗುವ ಸಾಮಗ್ರಿಗಳ ತಯಾರಿ ನಡೆಯುತ್ತಿದ್ದಿರಬಹುದು. ಅಂಗಡಿ, ವಾಹನಗಳ ಮೇಲೆ ತೂರಲು ಬೇಕಾಗುವ ಕಲ್ಲು, ಟೈರು ಸುಡಲು ಬೆಂಕಿಪಟ್ಣ, ಚುಮಣಿ ಎಣ್ಣೆ, ಪೊಲೀಸರ ಲಾಠಿ ಎದುರಿಸಲು ಕುಠಾರೆ, ಗುದ್ದಲಿ, ಪಿಕಾಸುಗಳ ಹಿಡಿಕೆ, ಗುರುತು ಸಿಗದಿರಲೆಂದು ಮುಖಕ್ಕೆ ಬೇಕಿದ್ದರೆ ಸುತ್ತಿಕೊಳ್ಳಬಹುದಾದ ಟುವಾಲುಗಳು ನಾಳಿನ ಹೋರಾಟಕ್ಕೆ ಸಿದ್ಧಗೊಳ್ಳುತ್ತಿದ್ದಿರಬಹುದು.

ನಾಳೆಯ ಗಲಾಟೆಗೆ ಕಾರಣವೇನಿದ್ದಿರಬಹುದು, ತಪ್ಪು ಒಪ್ಪು ಯಾರದು ಎಂಬುದು ಮಹೇಶನ ಗುಂಪಿನವರಿಗೆ ಬೇಕೇ ಆಗಿರಲಿಲ್ಲ; ಅದರ ಮೇಲೆ ಚರ್ಚೆ ವಾದಕ್ಕಿಳಿದು ಮತ್ತೆ ತಮ್ಮ ಗುರಿತಪ್ಪಿ ಮಾಡಲೇಬೇಕೆಂದಿದ್ದನ್ನು ಮರೆತು ತಮ್ಮ ಕೆಲಸ ಕೆಡಿಸಿಕೊಳ್ಳಬೇಕಿರಲಿಲ್ಲ. ಇವರು ನ್ಯಾಯಕ್ಕಾಗಿ ಹೋರಾಟಕ್ಕಿಳಿಯುತ್ತಿದ್ದಿಲ್ಲವಾದ್ದರಿಂದ ಸತ್ಯ ಎಂಬ ಯಾರದ್ದೋ ಗಂಟಿಗೆ ಕೈಯಿಟ್ಟು ಕಚ್ಚಿಸಿಕೊಳ್ಳುವುದು ಇವರಿಗೆ ಅಗತ್ಯವೇ ಕಾಣಲಿಲ್ಲ. ಬಣವೆಗೆ ಬೆಂಕಿಬಿದ್ದಾಗ ಮೈಕಾಸಿಕೊಳ್ಳುವುದೇ ಧ್ಯೇಯವಾಗಿಸಿಕೊಂಡವರ ತಳಿಗೆ ಮುಕುಟಪ್ರಾಯರಾದಂಥವರೆಲ್ಲ ಕಡ್ಲೆಗುಡ್ಡೆಯಲ್ಲಿಂದು ಎಂದೂ ಸಿಗದ ಅವಕಾಶವನ್ನು ಬಳಸಿಕೊಳ್ಳುವುದರ ಬಗ್ಗೆ ಹೊಂಚಿಯಾಗಿತ್ತು ಅಷ್ಟೇ!

ಮಹೇಶನಿಗೇನು ನಾಳೆಯ ನಡೆಯ ಬಗ್ಗೆ, ಪರಿಣಾಮದ ಬಗ್ಗೆ ಪೂರ್ತಿ ಯೋಜನೆಯಿತ್ತು ಎಂದೇನೂ ನಾವು ತಪ್ಪು ತಿಳಿಯಬೇಕಿಲ್ಲ. ಮೊನ್ನೆ ಆದಿತ್ಯವಾರ ಬಾಬುವಿನ ಶರಾಬು ಅಂಗಡಿಯಲ್ಲಿ ಕುಳಿತು ಸರ್ಕಾರಿ ಪ್ಯಾಕೆಟನ್ನು ಗಂಟಲಿಗೆ ಹೊಯ್ದುಕೊಳ್ಳುವಾಗ ಫಳಕ್ಕನೆ ಬಂದ ಉಪಾಯ ಇದು.

ಕಾಗಾಲು ತೇರಿನಲ್ಲಿ ತೋರಣ ಕಟ್ಟುವ ವೇಳೆ ಚಿಲ್ಲರೆ ವಿಷಯದಲ್ಲೆದ್ದ ಜಗಳ, ಖರೇ ಹೇಳಬೇಕೆಂದರೆ ಆವತ್ತು ರಾಗುವಾಗಲಿ, ಮಹೇಶನಾಗಲಿ ಕುಡಿಯದಿದ್ದರೆ ಹೊಂದಿಕೆ ಮಾಡಿಕೊಂಡು ಹೋಗಬಹುದಾಗಿದ್ದ ವಿಚಾರವಾಗಿತ್ತು. ತೋರಣವನ್ನು ದೇವಸ್ಥಾನದ ಕೆರೆಯ ಪಕ್ಕ ಕಟ್ಟಬೇಕೋ ಅಥವಾ ಕಾಮಾಕ್ಷಿ ಮನೆಗೆ ತಾಗಿಕೊಂಡಿದ್ದ ದೇವಸ್ಥಾನದ ದಣಪೆಯ ಸರ್ತ ಕಟ್ಟಬೇಕೋ ಎಂಬ ವಿಚಾರವಾಗಿ ಗಲಾಟೆ. ಎಲ್ಲೇ ತೋರಣ ಬಿಗಿದರೂ ರಾಗುವಿಗೆ ಹೋಗುವಂಥದ್ದೇನೂ ಇರಲಿಲ್ಲ. ಆದರೆ ಕಾಮಾಕ್ಷಿಯ ಮಗಳು ಸುಜಾತಾ ಮಹೇಶನನ್ನು ಕಂಡಲ್ಲೆಲ್ಲ ನಾಚಿದಂತೆ ಸಣ್ಣ ನಗು ನಗುವುದು ಮಹೇಶನಲ್ಲಿ ಏನೋ ಒಂದು ನಮನಿ ಭಾವನೆಯನ್ನು ಹುಟ್ಟುಹಾಕಿತ್ತು. ಒಳಗೊಳಗೇ ಸುಜಾತಾಳ ಮೇಲೆ ಪ್ರೀತಿ ಹುಟ್ಟಿಸಿಕೊಂಡಿದ್ದ ಮಹೇಶನಿಗೆ ಕಾಮಾಕ್ಷಿ ಮನೆ ಬದಿಯಲ್ಲೇ ತೋರಣ ಕಟ್ಟಿ ಅಲ್ಲೇ ಮಜ್ಜಿಗೆ ಸೇವೆಯಿಟ್ಟರೆ ಜಾತ್ರೆಗಂತ ಬಂದ ಸಂಭಾವಿತರೂ, ಅಪಾಪೋಲಿಗಳೂ ಮಜ್ಜಿಗೆ ಕುಡಿಯುವ ನೆಪದಲ್ಲಿ ಸುಜಾತಾಳನ್ನು ನೋಡಿ ಸೀಟಿ ಹೊಡೆಯುವುದು, ಕೂ ಹೊಡೆಯುವುದು ಮಾಡಿ ಕಾಟಕೊಡುತ್ತಾರೆ ಎಂಬುದು ಮಹೇಶನ ವಾದ.

ಆದರೇನು ಮಾಡುವುದು ತೋರಣಕಟ್ಟುವ ದಿನ ಇಬ್ಬರೂ ಕಂಠಪೂರ್ತಿ ಕುಡಿದಿದ್ದರು. ಕುಡಿದಾಗ ಏರುವಷ್ಟು ಸ್ವಾಭಿಮಾನ, ಹುಟ್ಟುವಷ್ಟು ಮರ್ಯಾದೆಯ ಪ್ರಶ್ನೆ ಮತ್ತೆ ಯಾವತ್ತೂ ಕಾಣಲು ಸಿಗದು. ಒಬ್ಬ ಏರಿ ಬಂದ ಎಂದು ಇನ್ನೊಬ್ಬವನೂ ಏರಿದ, ಒಬ್ಬ ಅಂಗಿ ಹಿಡಿದೆಳೆದ ಅಂತ ಇನ್ನೊಬ್ಬವನೂ ಎಳೆದ, ಒಬ್ಬ ಬೋಸುಡಿಕೆ ಎಂದ ಅಂತ ಇನ್ನೊಬ್ಬವನೂ ಬೋಳಿಮಗ ಎಂದ. ತೋರಣ ಕಟ್ಟುವ ಗಲಾಟೆಯಲ್ಲಿ ಅದೇನೇನು ನಡೆಯಲಿಲ್ಲ!! ಯಾರು ಯಾರು ಎಂದು ಇಬ್ಬರಿಗೂ